Akashvani: Bangalore
National Bulletins In Kannada
31.05.2025 / 7.35AM
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು:

- ಪ್ರಧಾನಮಂತ್ರಿ ನರೇಂದ್ರ ಮೋದಿ ಮಧ್ಯಪ್ರದೇಶ ಭೇಟಿ; ಅಹಿಲ್ಯಾ ಬಾಯಿ ಮಹಿಳಾ ಸಶಕ್ತೀಕರಣ ಮಹಾ ಸಮ್ಮೇಳನದಲ್ಲಿ ಭಾಗಿ
- ಮೂರು ಕಚ್ಚಾ ಅಡುಗೆ ತೈಲಗಳ ಮೇಲಿನ ಸುಂಕವನ್ನು ಶೇಕಡ ೧೦ಕ್ಕೆ ಇಳಿಸಿದ ಕೇಂದ್ರ ಸರ್ಕಾರ
- ಇಂದು ವಿಶ್ವ ತಂಬಾಕು ರಹಿತ ದಿನ; ತಂಬಾಕು ಬಳಕೆಯ ಅಪಾಯಗಳ ವಿರುದ್ಧ ಜಾಗೃತಿ
- ಥೈಲ್ಯಾಂಡ್ ಓಪನ್ ಅಂತಾರಾಷ್ಟ್ರೀಯ ಬಾಕ್ಸಿಂಗ್; ಭಾರತದ ಕಿರಣ್ ಮತ್ತು ದೀಪಕ್ ಫೈನಲ್‌ಗೆ ಲಗ್ಗೆ
- ಐಪಿಎಲ್ ಟಿ-೨೦ ಕ್ರಿಕೆಟ್; ಗುಜರಾತ್ ಟೈಟನ್ಸ್ ವಿರುದ್ಧ ಜಯದೊಂದಿಗೆ ಕ್ವಾಲಿಫೈಯರ್ ಎರಡರ ಹಂತಕ್ಕೇರಿದ ಮುಂಬೈ ಇಂಡಿಯನ್ಸ್

**********

ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಮಧ್ಯಪ್ರದೇಶಕ್ಕೆ ಒಂದು ದಿನದ ಭೇಟಿ ನೀಡಲಿದ್ದಾರೆ. ಈ ಭೇಟಿಯ ಸಂದರ್ಭದಲ್ಲಿ ಪ್ರಧಾನಿ, ಲೋಕಮಾತಾ ದೇವಿ ಅಹಲ್ಯಾ ಬಾಯಿ ಹೋಳ್ಕರ್ ಅವರ ೩೦೦ ನೇ ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ ಭೋಪಾಲ್‌ನಲ್ಲಿ ಲೋಕಮಾತಾ ದೇವಿ ಅಹಲ್ಯಾಬಾಯಿ ಮಹಿಳಾ ಸಶಕ್ತಿಕರಣ ಮಹಾಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ನಂತರ ಭೋಪಾಲ್‌ನಲ್ಲಿ ಬಹು ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಈ ಪ್ರದೇಶದಲ್ಲಿ ವಾಯು ಸಂಪರ್ಕವನ್ನು ಹೆಚ್ಚಿಸಲು ಪ್ರಧಾನಿಯವರು ದಾಟಿಯಾ ಮತ್ತು ಸತ್ನಾ ವಿಮಾನ ನಿಲ್ದಾಣಗಳನ್ನು ಉದ್ಘಾಟಿಸಲಿದ್ದಾರೆ. ಕ್ಷಿಪ್ರಾ ನದಿಯಲ್ಲಿ ೮೬೦ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಘಾಟ್ ನಿರ್ಮಾಣ ಕಾಮಗಾರಿಗಳಿಗೆ ಅವರು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ನಗರಗಳಲ್ಲಿ ಸಾರಿಗೆ ಮೂಲಸೌಕರ್ಯವನ್ನು ಸುಧಾರಿಸುವ ಬದ್ಧತೆಗೆ ಅನುಗುಣವಾಗಿ, ಪ್ರಧಾನಿಯವರು ಇಂದೋರ್ ಮೆಟ್ರೋದ ಹಳದಿ ಮಾರ್ಗದ ಆದ್ಯತಾ ಕಾರಿಡಾರ್‌ನಲ್ಲಿ ಪ್ರಯಾಣಿಕರ ಸೇವೆಗಳನ್ನು ಉದ್ಘಾಟಿಸಲಿದ್ದಾರೆ.ತಮ್ಮ ಭೇಟಿಯ ಸಮಯದಲ್ಲಿ, ಪ್ರಧಾನಿ ಅವರು, ೪೮೦ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ೧ ಸಾವಿರದ ೨೬೧ ಅಟಲ್ ಗ್ರಾಮ ಸುಶಾಸನ ಭವನಗಳ ನಿರ್ಮಾಣಕ್ಕಾಗಿ ಮೊದಲ ಕಂತನ್ನು ವರ್ಗಾಯಿಸಲಿದ್ದಾರೆ.

**********

ಲೋಕಮಾತಾ ಪುಣ್ಯ ಶ್ಲೋಕ ಅಹಿಲ್ಯಾ ಬಾಯಿ ಹೋಲ್ಕರ್ ಅವರ ೩೦೦ನೇ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಅವರ ಜನ್ಮಸ್ಥಳವಾದ ಮಹಾರಾಷ್ಟ್ರದ ಅಹಿಲ್ಯಾನಗರ ಜಿಲ್ಲೆಯ ಛೌಂಡಿಯಲ್ಲಿಂದು ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ವೇಳೆ ಛೌಂಡಿಯಲ್ಲಿ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು.

**********

ಕಚ್ಚಾ ಪಾಮ್ ಎಣ್ಣೆ, ಕಚ್ಚಾ ಸೋಯಾಬಿನ್ ಎಣ್ಣೆ ಹಾಗೂ ಕಚ್ಚಾ ಸೂರ್ಯಕಾಂತಿ ಎಣ್ಣೆಗಳ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಕೇಂದ್ರ ಸರ್ಕಾರ ಶೇಕಡ ೧೦ಕ್ಕೆ ಇಳಿಸಿದೆ. ಅಡುಗೆ ಎಣ್ಣೆಗಳ ಚಿಲ್ಲರೆ ಬೆಲೆಗಳನ್ನು ತಗ್ಗಿಸುವುದು ಮತ್ತು ದೇಶೀಯ ಎಣ್ಣೆ ಸಂಸ್ಕರಣಾಕಾರರನ್ನು ರಕ್ಷಿಸುವುದು ಈ ಕ್ರಮದ ಉದ್ದೇಶವಾಗಿದೆ. ಪರಿಷ್ಕೃತ ಸುಂಕವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಣಕಾಸು ಸಚಿವಾಲಯ ಅಧಿಸೂಚನೆ ಹೊರಡಿಸಿದೆ. ಇದಕ್ಕೂ ಮುನ್ನ, ಈ ಮೂರು ಕಚ್ಚಾ ತೈಲಗಳ ಮೇಲಿನ ಸುಂಕ ಶೇಕಡ ೨೦ರಷ್ಟಿತ್ತು. ಭಾರತ, ತನಗೆ ಅಗತ್ಯವಿರುವ ಅಡುಗೆ ಎಣ್ಣೆಯ ಪೈಕಿ ಶೇಕಡ ೫೦ಕ್ಕೂ ಹೆಚ್ಚು ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ. ೨೦೨೩-೨೪ ಎಣ್ಣೆ ಮಾರುಕಟ್ಟೆ ವರ್ಷದಲ್ಲಿ ಭಾರತ ೧.೩೨ ಲಕ್ಷ ಕೋಟಿ ಮೌಲ್ಯದ ೧೫೯.೬ ಲಕ್ಷ ಟನ್ ತೈಲಗಳನ್ನು ಆಮದು ಮಾಡಿಕೊಂಡಿದೆ. ಈ ನಡುವೆ, ಸಂಸ್ಕರಿಸಿದ ಎಣ್ಣೆಯ ಮೇಲಿನ ಸುಂಕ ಶೇಕಡ ೩೨.೫ರಷ್ಟೇ ಮುಂದುವರಿಯಲಿದೆ. ಭಾರತ, ಪಾಮ್ ತೈಲವನ್ನು ಮಲೇಷಿಯಾ ಮತ್ತು ಇಂಡೋನೇಷ್ಯಾ ಹಾಗೂ ಸೋಯಾಬಿನ್ ಎಣ್ಣೆಯನ್ನು ಬ್ರೆಜಿಲ್ ಮತ್ತು ಅರ್ಜೆಂಟಿನಾದಿಂದ ಆಮದು ಮಾಡಿಕೊಳ್ಳುತ್ತದೆ.

**********

ತಂಬಾಕು ಬಳಕೆಯ ಅಪಾಯಗಳ ವಿರುದ್ಧ ಜಾಗೃತಿ ಮೂಡಿಸಲು ಇಂದು ಜಾಗತಿಕವಾಗಿ ವಿಶ್ವ ತಂಬಾಕು ರಹಿತ ದಿನವನ್ನು ಆಚರಿಸಲಾಗುತ್ತಿದೆ. ತಂಬಾಕು ಬಳಕೆಯನ್ನು ಕೊನೆಗೊಳಿಸಲು ವಿಶ್ವ ಆರೋಗ್ಯ ಸಂಸ್ಥೆ ಈ ದಿನವನ್ನು ಜಾಗತಿಕವಾಗಿ ಪ್ರಾರಂಭಿಸಿದೆ. ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ, ವಿಶ್ವಾದ್ಯಂತ ಅಂದಾಜು ೧.೩ ಶತಕೋಟಿ ಜನರು ತಂಬಾಕು ಸೇವಿಸುತ್ತಾರೆ, ಇದು ತಡೆಗಟ್ಟಬಹುದಾದ ಸಾವಿಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಭಾರತವು ತಂಬಾಕಿನ ಎರಡನೇ ಅತಿದೊಡ್ಡ ಗ್ರಾಹಕ ಮತ್ತು ಉತ್ಪಾದಕ ರಾಷ್ಟ್ರವಾಗಿದೆ. ೨೦೧೯ ರ ಜಾಗತಿಕ ಯುವ ತಂಬಾಕು ಸಮೀಕ್ಷೆಯ ಪ್ರಕಾರ, ೧೩ ರಿಂದ ೧೫ ವರ್ಷ ವಯಸ್ಸಿನ ಶಾಲಾ ವಿದ್ಯಾರ್ಥಿಗಳಲ್ಲಿ ಶೇಕಡಾ ೮.೫ ರಷ್ಟು ಜನರು ದೇಶಾದ್ಯಂತ ವಿವಿಧ ರೂಪಗಳಲ್ಲಿ ತಂಬಾಕು ಸೇವಿಸುತ್ತಾರೆ. ತಂಬಾಕು ಸಾಂಕ್ರಾಮಿಕ ಮತ್ತು ಅದು ಉಂಟುಮಾಡುವ ತಡೆಗಟ್ಟಬಹುದಾದ ಸಾವು ಮತ್ತು ರೋಗದ ಬಗ್ಗೆ ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಉದ್ದೇಶದಿಂದ ೧೯೮೭ ರಲ್ಲಿ ಮೊದಲ ಬಾರಿಗೆ ವಿಶ್ವ ತಂಬಾಕು ರಹಿತ ದಿನವನ್ನು ಆಚರಿಸಲಾಯಿತು. ಈ ವರ್ಷದ ಘೋಷವಾಕ್ಯ "ಅಭಿಪ್ರಾಯವನ್ನು ಬಹಿರಂಗಪಡಿಸುವುದು: ತಂಬಾಕು ಮತ್ತು ನಿಕೋಟಿನ್ ಉತ್ಪನ್ನಗಳ ಮೇಲಿನ ಉದ್ಯಮ ತಂತ್ರಗಳನ್ನು ಬಹಿರಂಗಪಡಿಸುವುದು" ಎಂಬುದಾಗಿದೆ.

**********

ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ತನ್ನ ೨೦೨೨-೨೩ ಹಾಗೂ ೨೦೨೩-೨೪ರ ವಾರ್ಷಿಕ ವರದಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಿದೆ. ಆಯೋಗದ ಅಧ್ಯಕ್ಷ ಹನ್ಸ್‌ರಾಜ್ ಗಂಗರಾಮ್ ಮತ್ತು ಆಯೋಗದ ಸದಸ್ಯ ಭುವನ್ ಭೂಷಣ್ ಕಮಲ್, ರಾಷ್ಟ್ರಪತಿ ಅವರಿಗೆ ವರದಿಗಳನ್ನು ಹಸ್ತಾಂತರಿಸಿದರು.

**********

ನವದೆಹಲಿಯ ರಾಷ್ಟ್ರಪತಿ ಭವನದ ಸಾಂಸ್ಕೃತಿಕ ಕೇಂದ್ರದಲ್ಲಿ ಸಾಹಿತ್ಯ ಅಕಾಡೆಮಿಯು ಸಾಹಿತ್ಯ ಎಷ್ಟು ಬದಲಾಗಿದೆ ಎಂಬ ವಿಷಯದ ಕುರಿತು ಎರಡು ದಿನಗಳ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಿತ್ತು. ಸಮ್ಮೇಳನದಲ್ಲಿ ಸ್ತ್ರೀವಾದಿ ಸಾಹಿತ್ಯ, ಸಾಹಿತ್ಯದಲ್ಲಿನ ಬದಲಾವಣೆ ಮತ್ತು ಭಾರತೀಯ ಸಾಹಿತ್ಯದಲ್ಲಿನ ಹೊಸ ನಿರ್ದೇಶನಗಳ ಕುರಿತು ಅಧಿವೇಶನಗಳು ನಡೆದವು.

ಭಾಷಣಕಾರರು ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆಗಳು, ಸಮಾಜವನ್ನು ರೂಪಿಸುವಲ್ಲಿ ಸಾಹಿತ್ಯದ ಪಾತ್ರ ಮತ್ತು ಭಾರತೀಯ ಬರವಣಿಗೆಯ ಮೇಲೆ ಜಾಗತೀಕರಣದ ಪ್ರಭಾವವನ್ನು ಒತ್ತಿ ಹೇಳಿದರು. ದೇವಿ ಅಹಲ್ಯಾಬಾಯಿ ಹೋಳ್ಕರ್ ಅವರ ೩೦೦ನೇ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಅವರ ಜೀವನದ ಕುರಿತು ಪ್ರಸ್ತುತಿಯೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

**********

ಕಳೆದ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಭಾರತ ಶೇಕಡ ೭.೪ರಷ್ಟು ನೈಜ ಜಿಡಿಪಿ ಬೆಳವಣಿಗೆಯನ್ನು ಕಂಡಿದೆ ಎಂದು ಹೇಳಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಈ ಸಾಧನೆಗೆ ಉದ್ಯಮ ಮತ್ತು ಉತ್ಪಾದನಾ ಚಟುವಟಿಕೆಯನ್ನು ಶ್ಲಾಘಿಸಿದ್ದಾರೆ. ನವದೆಹಲಿಯಲ್ಲಿ ನಿನ್ನೆ ನಡೆದ ಲಕ್ಷ್ಮಿಪತ್ ಸಿಂಘಾನಿಯಾ - ಐಐಎಂ ಲಕ್ನೋ ರಾಷ್ಟ್ರೀಯ ನಾಯಕತ್ವ ಪ್ರಶಸ್ತಿಗಳು-೨೦೨೫ರಲ್ಲಿ ಮಾತನಾಡಿದ ಅವರು, ೨೦೨೪-೨೫ರ ಹಣಕಾಸು ವರ್ಷದಲ್ಲಿ ನೈಜ ಜಿಡಿಪಿ ಬೆಳವಣಿಗೆ ಶೇಕಡ ೬.೫ರಷ್ಟಿತ್ತು. ಭಾರತವು, ಬೆಳವಣಿಗೆಯನ್ನು ಸುಸ್ಥಿರವಾಗಿ ಕಾಯ್ದುಕೊಂಡಿದ್ದು, ನಿರಂತರವಾಗಿ ನಾಲ್ಕು ವರ್ಷಗಳಿಂದ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ ಎಂದು ಹಣಕಾಸು ಸಚಿವರು ಹೇಳಿದರು.

**********

ಪಂಜಾಬ್‌ನಲ್ಲಿ ಇಂದು "ಆಪರೇಷನ್ ಶೀಲ್ಡ್" ಅಡಿಯಲ್ಲಿ ಎರಡನೇ ಅಣಕು ಕವಾಯತು ನಡೆಸುತ್ತಿದೆ. ಗೃಹ ಸಚಿವಾಲಯದ ಮಾರ್ಗಸೂಚಿಗಳನ್ನು ಅನುಸರಿಸಿ ಗೃಹರಕ್ಷಕ ದಳದ ವಿಶೇಷ ಪೊಲೀಸ್ ಮಹಾನಿರ್ದೇಶಕ ಸಂಜೀವ್ ಕಲ್ರಾ ಈ ಸಂಬಂಧ ಆದೇಶಗಳನ್ನು ಹೊರಡಿಸಿದ್ದಾರೆ. ಯಾವುದೇ ಪ್ರತಿಕೂಲ ದಾಳಿಯ ವಿರುದ್ಧ ನಾಗರಿಕ ರಕ್ಷಣಾ ಸನ್ನದ್ಧತೆಯನ್ನು ಹೆಚ್ಚಿಸಲು ಅಣಕು ಕವಾಯತು ನಡೆಸಲಾಗುತ್ತಿದೆ. ಸಂಬಂಧಪಟ್ಟ ಎಲ್ಲಾ ಭದ್ರತಾ ಸಂಸ್ಥೆಗಳು, ಅಗ್ನಿಶಾಮಕ ದಳ, ನಾಗರಿಕ ರಕ್ಷಣಾ ಸ್ವಯಂಸೇವಕರು ಇದರಲ್ಲಿ ಭಾಗವಹಿಸುತ್ತಿದ್ದಾರೆ.

**********

ಥೈಲ್ಯಾಂಡ್‌ನಲ್ಲಿ ನಡೆಯುತ್ತಿರುವ ೪ನೇ ಥೈಲ್ಯಾಂಡ್ ಓಪನ್ ಅಂತಾರಾಷ್ಟ್ರೀಯ ಬಾಕ್ಸಿಂಗ್ ಟೂರ್ನಿಯಲ್ಲಿ ಭಾರತದ ಬಾಕ್ಸರ್‌ಗಳಾದ ಕಿರಣ್ ಮತ್ತು ದೀಪಕ್ ತಮ್ಮ ತಮ್ಮ ವಿಭಾಗಗಳಲ್ಲಿ ಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ.

ಮಹಿಳಾ ೮೦ ಪ್ಲಸ್ ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ ಕಿರಣ್, ಉಕ್ರೇನ್‌ನ ಪೊಲಿನಾ ಶೆರ್ನೆನ್ ವಿರುದ್ಧ ೫-೦ ಅಂತರದಲ್ಲಿ ಗೆಲುವು ದಾಖಲಿಸಿದರೆ, ಪುರುಷರ ೭೫ ಕೆಜಿ ವಿಭಾಗದಲ್ಲಿ ದೀಪಕ್ ಆತಿಥೇಯ ಥೈಲ್ಯಾಂಡ್‌ನ ಪೀರಾಪಾಟ್ ಯೇಸು ವಿರುದ್ಧ ೫-೦ ಅಂತರದಲ್ಲಿ ಜಯ ದಾಖಲಿಸಿದರು. ವಿಶ್ವ ಬಾಕ್ಸಿಂಗ್ ಹಾಗೂ ಏಷ್ಯನ್ ಬಾಕ್ಸಿಂಗ್‌ನ ಬೆಂಬಲದ ಮೇಲೆ ಆಯೋಜಿಸಲಾಗಿರುವ ಈ ಪ್ರತಿಷ್ಠಿತ ಬಾಕ್ಸಿಂಗ್ ಟೂರ್ನಿಗೆ ಭಾರತ ೧೯ ಸದಸ್ಯರ ತಂಡವನ್ನು ಕಳುಹಿಸಿದೆ.

**********

ಚಂಡಿಗಢದ ಮಹಾರಾಜ ಯದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯ ಎಲಿಮಿನೇಟರ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ೨೦ ರನ್‌ಗಳ ಗೆಲುವಿನೊಂದಿಗೆ ಮುಂಬೈ ಇಂಡಿಯನ್ಸ್ ತಂಡ, ಕ್ವಾಲಿಫೈಯರ್ ಎರಡು ಪಂದ್ಯಕ್ಕೆ ತನ್ನ ಸ್ಥಾನವನ್ನು ಖಚಿತಪಡಿಸಿಕೊಂಡಿದೆ. ಟಾಸ್ ಗೆದ್ದು, ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ ತಂಡ, ನಿಗದಿತ ೨೦ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೨೨೮ ರನ್ ಗಳಿಸಿತು. ಪ್ರತ್ಯುತ್ತರವಾಗಿ ಗುಜರಾತ್ ಟೈಟನ್ಸ್, ನಿಗದಿತ ೨೦ ಓವರ್‌ಗಳಲ್ಲಿ ೬ ವಿಕೆಟ್ ನಷ್ಟಕ್ಕೆ ೨೦೮ ರನ್‌ಗಳಿಸಲಷ್ಟೇ ಶಕ್ತವಾಗಿ ಸೋಲೊಪ್ಪಿಕೊಂಡಿತು. ಈ ಗೆಲುವಿನೊಂದಿಗೆ ಕ್ವಾಲಿಫೈಯರ್ ಎರಡರ ಹಂತಕ್ಕೆ ಏರಿರುವ ಮುಂಬೈ ತಂಡ ತಮ್ಮ ದಾಖಲೆಯ ೭ನೇ ಐಪಿಎಲ್ ಪ್ರಶಸ್ತಿ ಜಯಿಸಿರುವ ಹಂಬಲದಲ್ಲಿದೆ. ಸೋಲನುಭವಿಸಿದ ಗುಜರಾತ್ ತಂಡ, ಟೂರ್ನಿ ಉದ್ದಕ್ಕೂ ನೀಡಿದ ಉತ್ತಮ ಪ್ರದರ್ಶನದ ನಡುವೆಯೂ ಟೂರ್ನಿಯಿಂದ ಹೊರಬಿದ್ದಿದೆ.

**********

ವೈದ್ಯಕೀಯ ಸ್ನಾತಕೋತ್ತರ ಪದವಿ ಪ್ರವೇಶಕ್ಕಾಗಿ ಜೂನ್ ೧೫ ರಂದು ನಡೆಯಲಿರುವ ೨೦೨೫ರ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ- ನೀಟ್-ಪಿಜಿ ಎರಡು ಪಾಳಿಗಳಲ್ಲಿ ನಡೆಸುವ ಬದಲು ಒಂದೇ ಪಾಳಿಯಲ್ಲಿ ನಡೆಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದೆ. ನ್ಯಾಯಮೂರ್ತಿ ವಿಕ್ರಮ್ ನಾಥ್ ನೇತೃತ್ವದ ಪೀಠ ನಿನ್ನೆ, ಪರೀಕ್ಷೆಯನ್ನು ಒಂದೇ ಪಾಳಿಯಲ್ಲಿ ನಡೆಸಲು ವ್ಯವಸ್ಥೆ ಮಾಡುವಂತೆ ಮತ್ತು ಪ್ರಕ್ರಿಯೆಯ ಉದ್ದಕ್ಕೂ ಸಂಪೂರ್ಣ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿತು.

ಎರಡು ಪಾಳಿಗಳಲ್ಲಿನ ಪ್ರಶ್ನೆ ಪತ್ರಿಕೆಗಳು ಎಂದಿಗೂ ಒಂದೇ ಸಾಮ್ಯತೆಯ ಕಷ್ಟದ ಮಟ್ಟದಲ್ಲಿರಲು ಸಾಧ್ಯವಿಲ್ಲ ಎಂದು ಪೀಠ ಗಮನಿಸಿತು. ನೀಟ್-ಪಿಜಿ ಪರೀಕ್ಷೆಯ ಪಾರದರ್ಶಕತೆಯ ಕೊರತೆಯನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆಯನ್ನು ನ್ಯಾಯಪೀಠ ನಡೆಸಿತು.

**********